**ಬುತ್ತಿ ಚಿಗುರು**

## ಭಗವಂತ

ರಮೇಶ ಮದುವೆಯಾದ ಮೇಲೆ ಗೆಳೆಯ ರಂಗನಿಗೆ ಸಿಕ್ಕಿರಲಿಲ್ಲ. ಬಹಳ ದಿನಗಳ ಅನಂತರ ದಾರಿಯಲ್ಲಿ ಎದುರಾದ ಗೆಳೆಯನಿಗೆ ರಂಗ, 'ಏನಯ್ಯಾ ರಮೇಶ, ಮದುವೆಯಾದ ಮೇಲೆ ದೊಡ್ಡ ಬಂಗಲೆ ತಗೊಂಡೆಯಂತೆ?' ಎಂದು ಕೇಳಿದ. 'ಹೌದು ರಂಗ, ಭಗವಂತ ಕೊಡಿಸಿದ್ದು' ಎಂದ. 'ಕಾರೂ ತಗೊಂಡಿದ್ದೀಯ ಅಂತ ಕೇಳಿಬಂತು?' 'ಹೌದಪ್ಪ, ಅದೂ ಆ ಭಗವಂತನದೇ' ಎಂದಾಗ ರಂಗನಿಗೆ ರೋಸಿ ಹೋಯ್ತು. 'ಏನಯ್ಯಾ? ಎಲ್ಲದಕ್ಕೂ ಭಗವಂತನ ಹೆಸರೇ ಹೇಳ್ತಾ ಇದ್ದೀಯಲ್ಲ? ನಾನೂ ಮದುವೆಯಾಗ್ತೀನಿ. ನನಗೂ ಆ ಭಗವಂತ ಕಾರು–ಬಂಗಲೆ ಕೊಡ್ತಾನಾ?' ಎಂದ ರಂಗ. ಆಗ ರಮೇಶ, 'ಅಯ್ಯೋ ಹಾಗಲ್ಲ, ನಮ್ಮ ಮಾವನ ಹೆಸರು ಭಗವಂತ. ಅವರೇ ಕಾರು–ಮನೆ ಕೊಟ್ಟಿದ್ದು. ಅವರಿಗಿರೋದು ಒಬ್ಬಳೇ ಮಗಳು. ಅವಳನ್ನು ನಾನು ಮದುವೆಯಾಗಿದ್ದೀನಿ ಕಣೊ' ಎಂದಾಗ ರಂಗ ಅವಾಕ್ಕಾದ!

**ಶಂಕರೇಗೌಡ ತುಂಬಕೆರೆ**





## ಕಂಡದ್ದು ತಿಂದು...

ಗೆಳೆಯರಾದ ಶೀನ ಮತ್ತು ಗುಂಡ ಮದುವೆ ಮನೆಗೆ ಹೋಗಿದ್ದರು. ವಧುವರರಿಗೆ ಶುಭಾಶಯ ಹೇಳುವ ಮೊದಲೇ ಗುಂಡ ಊಟದ ಸಾಲಿನಲ್ಲಿ ಹೋಗಿ ನಿಂತಿದ್ದ. ಗೆಳೆಯ ಶೀನನಿಗೂ ಜಾಗ ಹಿಡಿದುಕೊಂಡ. ಊಟ ಆರಂಭವಾದ ಮೇಲೆ ಗುಂಡ ಕಣ್ಣು ಮುಚ್ಚಿಕೊಂಡು ಊಟ ಮಾಡುತ್ತಿದ್ದುದನ್ನು ನೋಡಿದ ಶೀನ, 'ಯಾಕೋ ಗುಂಡ? ಕಣ್ಣು ಮುಚ್ಚಿಕೊಂಡು ತಿನ್ನುತ್ತಿದ್ದೀಯಾ? ನಿನಗೇನಾಗಿದೆಯೊ' ಎಂದು ಕೇಳಿದ. ಗುಂಡ, 'ಯಾವಾಗ ನೋಡಿದ್ರೂ ನನ್ನ ಹೆಂಡತಿ ಕಂಡದ್ದನ್ನೆಲ್ಲಾ ತಿಂದು ತಿಂದು ಹೇಗಾಗಿದ್ದೀರಾ ನೋಡಿ ಅಂತ ಬೈಯ್ತಾಳೆ ಕಣೊ... ಅದಕ್ಕೆ!' ಎಂದು ಹೇಳಿದಾಗ ಶೀನ ತಬ್ಬಿಬ್ಬಾದ.

**ವಿ. ವಿಜಯೇಂದ್ರ ರಾವ್**